ಆ) ಪ್ರವಾಸಿಗರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಇಳಿಮುಖವಾಗಲು ಕಾರಣಗಳೇನು :

ಇ) ಪ್ರವಾಸಿಗರ ಸಂಖ್ಯೆ ಹೆಚ್ಚಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳುವುದು ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಸೆಪ್ಟೆಂಬರ್ 2000 ರಿಂದ ಆಗಸ್ಟ್ 2001 ರವರೆಗೆ 15,45,417

ಸೆಪ್ಟೆಂಬರ್ 2001 ರಿಂದ ಆಗಸ್ಟ್ 2002 ರವರೆಗೆ 13,94,779

ಸೆಪ್ಟೆಂಬರ್ 2002 ರಿಂದ ಜೂನ್ 2003 ರವರೆಗೆ 9,34,261

ಆ) ಸದರಿ ಅವಧಿಯಲ್ಲಿ ಸಂಭವಿಸಿದ ಕೆಲವೊಂದು ಪ್ರಾದೇಶಿಕ ಸಮಸ್ಯೆಗಳಿಂದಾಗಿ ಪ್ರವಾಸಿಗರ ಸಂಖ್ಯೆಯಲ್ಲಿ ಇಳಿಮುಖವಾಗಿದೆ.

ಇ) ಬೃಂದಾವನ ಉದ್ಯಾನವನವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಬರಪರಿಹಾರ ಕಾರ್ಯಕ್ರಮಗಳು

4362(5018) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಯಾವ ಯಾವ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ ;

ಆ) ಈ ತಾಲ್ಲೂಕುಗಳಲ್ಲಿ ಬರ ಪರಿಹಾರಕ್ಕಾಗಿ ಯಾವ ಯಾವ ಕ್ರಮಕೈಗೊಳ್ಳಲಾಗಿದೆ : ಇದಕ್ಕಾಗಿ ಎಷ್ಟು ವೆಚ್ಚ ಮಾಡಲಾಗಿದೆ : ಇನ್ನೂ ಎಷ್ಟು ವೆಚ್ಚ ಮಾಡಲಾಗುವುದು ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ ಎಂ. (ಕಂದಾಯ ರಾಜ್ಯ ಸಚಿವರು) :

ಅ) 2003–2004 ರಲ್ಲಿ 126 ತಾಲ್ಲೂಕುಗಳನ್ನು ಇದುವರೆಗೆ ಬರಪೀಡಿತ ಪ್ರದೇಶವೆಂದು ಘೋಷಿಸಿದೆ. 2002–03 ರಲ್ಲಿ 159 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲಾಗಿದೆ.

ಆ) ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಯಾದ ಅನುದಾನದಲ್ಲಿ ತಾಲ್ಲೂಕುವಾರು ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ. ಜಿಲ್ಲಾವಾರು ಬಿಡುಗಡೆ ಮಾಡಲಾಗುತ್ತಿದೆ. ಅದರಂತೆ ಬಿಡುಗಡೆಯಾದ ಅನುದಾನದಲ್ಲಿ ಉದ್ಯೋಗ ಸೃಜನೆ, ಕುಡಿಯುವ ನೀರಿನ ವ್ಯವಸ್ಥೆ, ಜಾನುವಾರುಗಳಿಗೆ ಮೇವು, ಔಷಧಿ, ಗೋಶಾಲೆ ತೆರೆಯುವುದು ಬಿತ್ತನೆ ಬೀಜ ರಿಯಾಯಿತಿ ಸಾಲದ ಮೇಲಿನ ಬಡ್ಡಿ ಮನ್ನಾ ಇತ್ಯಾದಿ ಬರಪರಿಹಾರ ಉದ್ದೇಶಕ್ಕಾಗಿ 2002–03ನೇ ಸಾಲಿನಲ್ಲಿ ಒಟ್ಟು ರೂ. 139.36 ಕೋಟಿ ಹಾಗೂ 2003–04ನೇ ಸಾಲಿನಲ್ಲಿ ಜೂನ್ 2003 ರ ಅಂತ್ಯದವರೆಗೆ ರೂ. 78.83 ಕೋಟಿ ಖರ್ಚು ಮಾಡಲಾಗಿದೆ.

ಪರಿಸ್ಥಿತಿ ನೋಡಿಕೊಂಡು ಅನುದಾನ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಬೆಂಗಳೂರು ನಗರ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ನೂತನ ಸಾಮಿಲ್‌ಗಳ ಪ್ರಾರಂಭ

4363(5246) ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ (ಕುಂದಗೋಳ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ಹೊಸದಾಗಿ ಸಾಮಿಲ್ ಲೈಸನ್ಸ್ ಮಂಜೂರು ಮಾಡಿರುವ ಸಂಖ್ಯೆ ಎಷ್ಟು ; (ಸಾಮಿಲ್‌ಗಳ ಹೆಸರು, ವಿಳಾಸ, ಮಂಜೂರು ಮಾಡಿದ ದಿನಾಂಕಗಳ ವಿವರ ಒದಗಿಸುವುದು) :

ಆ) ಕಾನೂನು ಉಲ್ಲಂಘಿಸಿ ಹೊಸದಾಗಿ ಮಂಜೂರು ಮಾಡಿರುವ ಸಾಮಿಲ್‌ಗಳ ಸ್ಥಳ ಅರಣ್ಯ ಪ್ರದೇಶದಿಂದ 10 ಕಿ.ಮೀ.ರೊಳಗೆ ಇರುವ ವಿಷಯ ಸರ್ಕಾರದ ಗಮನಕ್ಕೆ ತಂದಾಗ್ಯೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

ಇ) ಆದೇಶ ಉಲ್ಲಂಘಿಸಿ ಸಾಮಿಲ್‌ಗಳನ್ನು ಮಂಜೂರು ಮಾಡಿರುವ ಅಧಿಕಾರಿಗಳ ಮೇಲೆ ತಕ್ಷಣ ಶಿಸ್ತು ಕ್ರಮ ಕೈಗೊಳ್ಳಲಾಗುವುದೇ ; ಹಾಗಿದ್ದಲ್ಲಿ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ 43 ಸಾಮಿಲ್‌ಗಳಿಗೆ ಪರವಾನಿಗೆ ನೀಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಹೊಸದಾಗಿ ಮಂಜೂರು ಮಾಡಿರುವ ಸಾಮಿಲ್‌ಗಳಲ್ಲಿ ಕೇವಲ ಆಮದು ಮಾಡಿಕೊಳ್ಳಲಾದ ಮರ ಕೊಯ್ಯಲು ಪರವಾನಗಿ ನೀಡಲಾಗಿದೆ.

ಸಾಮಿಲ್ ಮಾಲೀಕರು ಈ ಬಗ್ಗೆ ಇಲಾಖೆಗೆ ಮುಚ್ಚಳಿಕೆ ಬರೆದುಕೊಟ್ಟಿರುತ್ತಾರೆ.

ಈ ಸಾಮಿಲ್‌ಗಳಲ್ಲಿ ಸ್ಥಳೀಯ ಮರಗಳನ್ನು ಕೊಯ್ಯುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲವಾದುದರಿಂದ ಕ್ರಮ ತೆಗೆದುಕೊಂಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಅನುಬಂಧ

ಕಳೆದ 3 ವರ್ಷಗಳಲ್ಲಿ ಹೊಸದಾಗಿ ಮಂಜೂರು ಮಾಡಿರುವ ಸಾಮಿಲ್‌ಗಳ ಹೆಸರು, ವಿಳಾಸ ಮಂಜೂರು ಮಾಡಿದ ದಿನಾಂಕಗಳ ವಿವರ

ಕ್ರಮ ಸಂಖ್ಯೆ	ಸಾಮಿಲ್ ಹೆಸರು ಮತ್ತು ವಿಳಾಸ	ಸ್ಥಾಪನೆ ಮಂಜೂರಾತಿ ನೀಡಿದ ದಿನಾಂಕ
1	2	3
1	ಮೆ: ವಶಿಷ್ಟ ಟಿಂಬರ್, ನಂ.1, ಟಿ.ಸಿ. ಪಾಳ್ಯ, ಅಕ್ಷಯನಗರ ಬಡಾವಣೆ, ಕೌದೇನಹಳ್ಳಿ, ಕೃಷ್ಣರಾಜಪುರ ಹೋಬಳಿ, ಬೆಂಗಳೂರು ಪೂರ್ವ	18.02.2002
2	ಮೆ: ಮಾರುತಿ ಸಾಮಿಲ್, ನಂ.12:3, ಕುಂಬಿನ ಅಗ್ರಹಾರ ಹತ್ತಿರ, ಸತ್ಯ ಸಾಯಿಬಾಬ ಆಶ್ರಮ, ಬೆತ್ತೂರು ಕಾಲೋನಿ ಎದುರು, ಕಾಡುಗೋಡಿ, ಬೆಂಗಳೂರು–67.	13.02.2002
3	ಮೆ: ಶ್ರೀ ಚಾಮುಂಡೇಶ್ವರಿ ಟಿಂಬರ್ಸ್, ನಂ. 6:1, ನ್ಯೂ ಟಿಂಬರ್ ಯಾರ್ಡ್ ಲೇಔಟ್, ಮೈಸೂರು ರಸ್ತೆ ಬೆಂಗಳೂರು–26	
4	ಮೆ: ರಾದೇಶ್ಯಾಮ್ ಟಿಂಬರ್ ಟ್ರೇಡರ್ಸ್, ನಂ. 9:1, ನ್ಯೂ ಟಿಂಬರ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು–26	13.02.2001
5	ಮೆ: ಮಹಾಲಕ್ಷ್ಮೀ ಸಾಮಿಲ್, ನಂ. 583, ಹಳೇ ಮದ್ರಾಸ್ ರಸ್ತೆ, ಬಟ್ಟರಹಳ್ಳಿ, ಕೃಷ್ಣರಾಜಪುರ ಹೋಬಳಿ, ಬೆಂಗಳೂರು ಪೂರ್ವ, ಬೆಂಗಳೂರು–49	18.02.2002

1	2	3
6	ಮೆ: ಧನಲಕ್ಷ್ಮಿ ಪುಡ್ ಇಂಡಸ್ಟ್ರೀಸ್, ನಂ. 109:2, ಹಳೇ ಮದ್ರಾಸ್ ರಸ್ತೆ, (ಬಳ್ಳಾರಿ), ರಿಂಗ್ ರಸ್ತೆ, ಬಾಣಸವಾಡಿ, ಕೃಷ್ಣರಾಜಪುರ ಹೋಬಳಿ, ಬೆಂಗಳೂರು ಪೂರ್ವ, ಬೆಂಗಳೂರು–43	18.02.2002
7	ಮೆ: ಶ್ರೀ ಭಗವಾನ್ ಸಾಮಿಲ್, ಹಳೇ ಮದ್ರಾಸ್ ರಸ್ತೆ, ಬಟ್ಟರಹಳ್ಳಿ, ಕೃಷ್ಣರಾಜಪುರ ಹೋಬಳಿ, ಬೆಂಗಳೂರು–43	18.02.2002
8	ಮೆ: ಧನಲಕ್ಷ್ಮಿ ಟಿಂಬರ್ಸ್, ಬೂದಿಗೆರೆ ಕ್ರಾಸ್ ಬಂಡಾಪುರ ದಾಖಲೆ ಬಿದರಹಳ್ಳಿ ಹೋಬಳಿ, ಬೆಂಗಳೂರು–49	18.02.2002
9	ಮೆ: ವರುಣಿ ಇಂಡಸ್ಟ್ರೀಸ್, ನಂ. 138:ಬಿ, 9ನೇ ಮುಖ್ಯ ರಸ್ತೆ, 3ನೇ ಹಂತ, ಪೀಣ್ಯ ಇಂಡಸ್ಟ್ರೀಯಲ್ ಏರಿಯಾ, ಬೆಂಗಳೂರು–58	13.02.2002
10	ಮೆ: ಮಹಾಲಕ್ಷ್ಮಿ ಟಿಂಬರ್ ಡಿಪೋ, ನಂ. 748:2, ಹಳೇ ಮದ್ರಾಸ್ ರಸ್ತೆ, ಭಟ್ಟರಹಳ್ಳಿ, ಬಿದರ ಹೋಬಳಿ, ಬೆಂಗಳೂರು ಪೂರ್ವ, ಬೆಂಗಳೂರು–49	18.02.2002
11	ಮೆ: ಕಲ್ಯಾಣಿ ಟಿಂಬರ್, ನೋ. 10:3, ಸೈಟ್ ನಂ. 130, ಮಾರತ್‌ಹಳ್ಳಿ, ದೇವರ ಬೀಸನ ಹಳ್ಳಿ, ರಿಂಗ್ ರಸ್ತೆ, ವರ್ತೂಲ ಹೋಬಳಿ, ಬೆಂಗಳೂರು–37	18.02.2002
12	ಮೆ: ಬಾಲಾಜಿ ವುಡ್ ಇಂಡಸ್ಟ್ರೀಸ್, ನಂ. 129, ಸರ್ವೆ ನಂ. 10:2, ಮಾರತ್ ಹಳ್ಳಿ, ದೇವರಬೀಸನಹಳ್ಳಿ, ರಿಂಗ್‌ರಸ್ತೆ, ವರ್ತುಲ ಹೋಬಳಿ, ಬೆಂಗಳೂರು–37	18.02.2002
13	ಮೆ: ಪೂರ್ಣಿಮ ಸಾಮಿಲ್, ನೆಲಮಂಗಲ ತಾಲ್ಲೂಕು, ದಾಸನಪುರ ಹೋಬಳಿ, ಅಡಕಮಾರನಹಳ್ಳಿ, ಜೈನ್ ಟೆಂಪಲ್ ಎದುರು, ಬೆಂಗಳೂರು	
14	ಮೆ: ಜೆ.ಕೆ. ಟಿಂಬರ್ಸ್, ಹೆಚ್‌ಎಎಲ್ ವೈಟ್ ಫಿಲ್ಡ್ ಮುಖ್ಯ ರಸ್ತೆ, ರಾಮ್‌ಗೊಂಡನಹಳ್ಳಿ (ಸಿದ್ದಾಪುರ) ಅಂಚೆ, ಬೆಂಗಳೂರು–66	04.12.2001
15	ಮೆ: ಜೆ.ಕೆ. ಎಂಟರ್‌ಪ್ರೈಸಸ್, ನಂ. 45:1, ಆರ್‌ಎಂ ನಗರ ಮುಖ್ಯ ರಸ್ತೆ, ಬಾಣಸಬಾಡಿ ಅಂಚೆ, ಬೆಂಗಳೂರು–43	04.12.2001
16	ಮೆ: ಠಾಕೂರ್ ವಿನಯ್ ಟಿಂಬರ್ ಸೇಲ್ ಡಿಪೋ, ತ್ರಿವೇಣಿ ರಸ್ತೆ, ಯಶವಂತಪುರ, ಬೆಂಗಳೂರು–22	04.02.2001
17	ಮೆ: ದುರ್ಗಾ ಟಿಂಬರ್ ಟ್ರೇಡರ್ಸ್, ನಂ. 91, ಭೀಮಜ್ಯೋತಿನಗರ, ಎಲ್‌ಐಸಿ ಕಾಲೋನಿ, 2ನೇ ಹಂತ, ವೆಸ್ಟ್ ಆಫ್ ಕಾರ್ಡ್ ರೋಡ್, ಶಂಕರ ಮಠ್ ವೃತ್ತ, ಬೆಂಗಳೂರು–79	04.12.2001
18	ಮೆ: ಶ್ರೀ ಗಣೇಶ್ ಸಾಮಿಲ್, ನಂ. 21:4, ಮತ್ತು 21:5, ಗೊಟ್ಟಿಗೇರೆ ಬನ್ನೇರುಘಟ್ಟ ರಸ್ತೆ, ಕ್ರೇಜಿ ವಾಟರ್ ಪಾರ್ಕ್ ಎದುರು, ಬೆಂಗಳೂರು–83	04.12.2001

1	2	3
19	ಮೆ: ಶ್ರೀ ಉಮಾ ಶಕ್ತಿ ಸಾಮಿಲ್, ನಂ. 278:8, ಎನ್‌ಟಿವೈ ಲೇಔಟ್, ಮೈಸೂರು ರಸ್ತೆ, ಬೆಂಗಳೂರು–26	04.12.2001
20	ಮೆ: ಲಕ್ಷ್ಮಿ ಟಿಂಬರ್ಸ್, ನಂ.406, 3ನೇ ಹಂತ, ವೆಸ್ಟ್ ಆಫ್ ಕಾರ್ಡ್ ರೋಡ್, ಮಂಜುನಾಥನಾಗರ, ಬೆಂಗಳೂರು–10	04.12.2001
21	ಮೆ: ಓಂ ಟಿಂಬರ್ಸ್ ಅಂಡ್ ಪ್ಲೈ ವುಡ್, ನಂ. 152, ನಾಗವಾರ ರಿಂಗ್ ರಸ್ತೆ, ಪಾರ್ವತಿ ಥಿಯೇಟರ್ ಹತ್ತಿರ, ನಾಗವಾರ ವೃತ್ತ, ಬೆಂಗಳೂರು–45	04.12.2002
22	ಮೆ: ಸೆಜಾಲ್ಸ್ ಟಿಂಬರ್ಸ್, ನಂ. 6, ಬಳ್ಳಾರಿ ಹಳೇ ಮದ್ರಾಸ್ ರಸ್ತೆ, ಓಟರ್ ರಿಂಗ್ ರಸ್ತೆ, ಬಾಣಸವಾಡಿ, ಬೆಂಗಳೂರು–43	01.01.2002
23	ಮೆ: ಶ್ರೀ ರಾಮ್ ಟಿಂಬರ್ ಟ್ರೇಡರ್ಸ್, ನಂ. 109:1, ಬಳ್ಳಾರಿ ಹಳೇ ಮದ್ರಾಸ್ ರಸ್ತೆ, ಓಟರ್ ಸಿಂಗ್ ರಸ್ತೆ, ಬಾಣಸವಾಡಿ, ಬೆಂಗಳೂರು–43	
24	ಮೆ: ಶ್ರೀಕೃಷ್ಣ ಸಾಮಿಲ್, ನಂ. 31:1, ಹಳೇ ಮದ್ರಾಸ್ ರಸ್ತೆ, ಭಟ್ಟರಹಳ್ಳಿ, ಬೆಂಗಳೂರು	01.01.2002
25	ಮೆ: ನಾಗ್‌ಜಿ ಟಿಂಬರ್ಸ್ ಅಂಡ್ ಪ್ಲೈವುಡ್, ನಂ. 11, ದಾಸಪ್ಪ ಲೇಔಟ್, ರಾಮಮೂರ್ತಿನಗರ, ಬೆಂಗಳೂರು–16	01.01.2002
26	ಮೆ: ಶ್ರೀ ಗಣೇಶ್ ಟಿಂಬರ್ ಅಂಡ್ ಪ್ಲೈವುಡ್, ನಂ. 355–55:3, ಅಗರ, ಅಗರ ಪೋಸ್ಟ್, ಸರ್ಜಾಪುರ ಮುಖ್ಯ ರಸ್ತೆ, ಓಮನ್ ಟಾಪೆಜ್ ಅಪಾರ್ಟ್‌ಮೆಂಟ್ ಹತ್ತಿರ, ಬೆಂಗಳೂರು–34	15.12.2001
27	ಮೆ: ಕೈಲಾಸ್ ಟಿಂಬರ್ ಇಂಡಸ್ಟ್ರೀಸ್, ನಂ 320, 9ನೇ ಅಡ್ಡರಸ್ತೆ, ವಿಲ್ಸನ್‌ಗಾರ್ಡನ್, ಬೆಂಗಳೂರು–27	28.05.2001
28	ಮೆ: ಹನುಮಾನ್ ಸಾಮಿಲ್, ಖಾತೆ ನಂ 299, ಹಳೇ ಮದ್ರಾಸ್ ರಸ್ತೆ, ಅವಲಹಳ್ಳಿ, ಬಿದರಹಳ್ಳಿ ಹೋಬಳಿ, ಬೆಂಗಳೂರು	28.05.2002
29	ಮೆ: ಮುಸ್ತಫಾ ಟಿಂಬರ್ಸ್, ಹಳೇ ಮದ್ರಾಸ್ ರಸ್ತೆ, ಕೃಷ್ಣರಾಜಪುರ, ಬೆಂಗಳೂರು	28.05.2002
30	ಮೆ: ಗಣೇಶ್ ಟಿಂಬರ್ಸ್, ನಂ. 6:1 6:2, ಸಿಎಂಹೆಚ್ ರಸ್ತೆ, ಲಕ್ಷ್ಮೀಪುರ, ಅಲಸೂರು, ಬೆಂಗಳೂರು	28.05.2002
31	ಮೆ: ಹಿಮಾಲಯ ಟಿಂಬರ್ ಟ್ರೇಡರ್ಸ್, ಕೆನರಾ ಬ್ಯಾಂಕ್ ಹತ್ತಿರ, ವರ್ತೂರು ಮುಖ್ಯ ರಸ್ತೆ, ಬೆಂಗಳೂರು ಪೂರ್ವ	
32	ಮೆ: ಶ್ರೀ ಕಾಳಿಕಾ ಸಾಮಿಲ್, ನಂ. 8, ಟಿಂಬರ್ ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು–26	28.05.2002
33	ಮೆ: ಲಕ್ಷ್ಮೀ ಟಿಂಬರ್ ಅಂಡ್ ಪ್ಲೈವುಡ್, ಬೆಟ್ಟಹಳ್ಳಿ ರಸ್ತೆ, ಅಟ್ಟೂರ್ ಲೇಔಟ್, ಯಲಹಂಕ, ಬೆಂಗಳೂರು–64	04.12.2001
34	ಮೆ: ಲಕ್ಷ್ಮೀ ಟಿಂಬರ್ ಮಾರ್ಟ್ ೯, ನಂ. 77–92, ಕಲ್ಕರೇ ಮುಖ್ಯ ರಸ್ತೆ, ಕೌಡೇನ ಹಳ್ಳಿ, ರಾಮಮೂರ್ತಿನಗರ ಪೋಸ್ಟ್, ಬೆಂಗಳೂರು–16	04.12.2002

1	2	3
35	ಮೆ: ಗೀತಾಂಜಲಿ ಸಾಮಿಲ್, ನಂ. 24:1, ಹೆಸರು ಘಟ್ಟ ರಸ್ತೆ, ಚಿಕ್ಕಸಂದ್ರ, ಬೆಂಗಳೂರು	04.12.2001
36	ಮೆ: ಉಮಾ ಎಜೆನ್ಸಿಸ್, ನೆಲಗದರನಹಳ್ಳಿ ರಸ್ತೆ ನಾಗಸಂದ್ರ ಪೊಸ್ಟ್, ಬೆಂಗಳೂರು–73	04.12.2001
37	ಮೆ: ಕಾವೇರಿ ಟಿಂಬರ್ಸ್, ನಂ. 2:3, ನ್ಯೂ ಬಿಇಎಲ್ ರಸ್ತೆ, ದೇವಸಂದ್ರ, ಬೆಂಗಳೂರು–94	04.12.2001
38	ಮೆ: ಅಂಬಿಕಾ ವಿಜಯ ಸಾಮಿಲ್, ನಂ. 24:1, ಚಿಕ್ಕಸಂದ್ರ, ಹೆಸರುಘಟ್ಟ ರಸ್ತೆ, ರೈಲ್ವೆಗೇಟ್ ಹತ್ತಿರ, ಬೆಂಗಳೂರು	04.12.2001
39	ಮೆ: ಸುರಣಿ ಟಿಂಬರ್, ನಂ. 18:1ಸಿ:ಸಿ3, ದೊಡ್ಡಕೆನ್ನಳ್ಳಿ, ಸರ್ಜಾಪುರ ರಸ್ತೆ, ರೈಲ್ವೆಗೇಟ್ ಹೆತ್ತಿರ, ಬೆಂಗಳೂರು–35	04.12.2001
40	ಮೆ: ಗೀತಾ ಟಿಂಬರ್, ನಂ. 11, ನ್ಯೂ ಟಿಂಬರ್ ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು.	
41	ಮೆ: ಮಾರುತಿ ಟಿಂಬರ್ ಅಂಡ್ ಪ್ಲೈವುಡ್, ಸುಲ್ತಾನ್ ಪಾಳ್ಯ ಮುಖ್ಯ ರಸ್ತೆ, ಮನೋರಾಯಣ ಪಾಳ್ಯ, ಆರ್.ಟಿ.ನಗರ, ಬೆಂಗಳೂರು–32	04.12.2001
42	ಮೆ: ಮಾರುತಿ ವುಡ್ ಇಂಡಸ್ಟ್ರೀಸ್, ನಂ. 125, ಚಂದಾಪುರ ಮುಖ್ಯ ರಸ್ತೆ, ಆನೇಕಲ್, ಬೆಂಗಳೂರು ಗ್ರಾಮಾಂತರ ಜಿಲ್ಲೆ	
43	ಮೆ: ಉಮಿಯ ವಿಜಯ ಸಾಮಿಲ್, ನಂ. 324:1, ಮೈಸೂರು ರಸ್ತೆ, ಕ್ವಾಲೀಟಿ ಬಿಸ್ಕಟ್ ಎದುರು, ಬೆಂಗಳೂರು–39	04.12.2001

ಕುಂದಗೋಳ – ಶರೇವಾಡ ಸವಣನೂರು ರಸ್ತೆಗಳ ದುರಸ್ತಿ

4364(5266) ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ (ಕುಂದಗೋಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಂದಗೋಳ–ಶೇರವಾಡ ಸವಣೂರು ರಸ್ತೆಯನ್ನು ಹೆದ್ದಾರಿ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ ;

ಆ) ಜನರ ಮತ್ತು ವಾಹನಗಳ ಓಡಾಟದಿಂದಾಗಿ ರಸ್ತೆಗಳು ಸಾಕಷ್ಟು ದುಸ್ಥಿತಿಯಲ್ಲಿರುವುದರಿಂದ, ಈಗಲಾದರೂ ರಾಜ್ಯ ಹೆದ್ದಾರಿಯನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದೆ : ಹಾಗಿದ್ದಲ್ಲಿ, ಹೆದ್ದಾರಿಯ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ;

ಇ) ಕುಂದಗೋಳ ತಾಲ್ಲೂಕಿನ ಕಳಸ, ಕಮಡೊಳ್ಳಿ ಗ್ರಾಮಗಳು 15 ಸಾವಿರ ಜನಸಂಖ್ಯೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ 30 ಸಾವಿರ ಜನಸಂಖ್ಯೆಯು ಈ ರಸ್ತೆಯಲ್ಲಿ ಓಡಾಡುತ್ತಿರುವುದರಿಂದ ವಾಹನಗಳ ಸಂಚಾರ ದಟ್ಟಣೆಯಿಂದಾಗಿ ಸಾಕಷ್ಟು ಕೆಟ್ಟು ಹೋಗಿರುವುದರಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಈ) ಸದರೀ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರ ಉದ್ದೇಶಿಸಿದೆಯೆ :